ದಿನಾಂಕಃ 13-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ಮುಂದುವರಿದ ಪಾಟೀಸವಾಲು ಪ್ರತಿವಾದಿಗಳ ರವರ ಪರ ವಕೀಲರಾದ ಶ್ರೀ. ಟಿ ಎನ್ ಎಸ್ ವಕೀಲರಿಂದ

ನಿಪಿ-1 ರಲ್ಲಿ ಸೈಟ್ ನಂ. 14 ರ ವಿಸ್ತೀರ್ಣ ಪೂರ್ವ ಪಶ್ಚಿಮ 32 ಅಡಿ ಇರುವುದನ್ನು 2 ಅಂತ ತಿದ್ದಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಅದು ಈ ದಾಖಲೆಯಲ್ಲಿ ಕಾಣಿಸುತ್ತಿದೆ ಎಂದರೆ ಕಾಣಿಸುತ್ತಿದೆ. ಪಂಚಾಯ್ತಿ ದಾಖಲೆಳು ತಿದ್ದಿದ್ದಾರೆ ಅಂತ ಪಂಚಾಯ್ತಿಯವರು ಹಿಂಬಹರ ನೀಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಪಂಚಾಯ್ತಿ ದಾಖಲೆಗಳಲ್ಲಿ ನಿಮ್ಮದು ಪೂರ್ವ ಪಶ್ಚಿಮ 22 ಅಡಿ ಉತ್ತರ ದಕ್ಷಿಣ 50 ಅಡಿ ಅಂತ ಇದೆ ಎಂದರೆ ಸರಿಯಲ್ಲ. ಅದನ್ನು 49 ಅಡಿ ಮತ್ತು 44 ಅಡಿ ಅಂತ ಹೊಸದಾಗಿ ಸೇರಿಸಿರುತ್ತಾರೆ ಎಂದರೆ ಇಲ್ಲ. ಚೆಕ್ಕುಬಂದಿಗಳೂ ಕೂಡ ನಂತರದಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ ಮೊದಲಿನಿಂದಲೂ ಇರುತ್ತದೆ. ನಿಪಿ-3 ಪಂಚಾಯ್ತಿಯವರು ನೀಡಿರುವ ಪರವಾನಗಿ ಅಲ್ಲ ಎಂದರೆ ಸರಿಯಲ್ಲ. ಅಲ್ಲಿ ನೀಡಿರುವ ಹಾಗೆ ಯಾವುದೇ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-3 ದಾಖಲೆಯನ್ನು ಸೃಷ್ಟಿಮಾಡಿಕೊಂಡು ತಂದು ಹಾಕಿರುವುದು ಎಂದರೆ ಸರಿಯಲ್ಲ. ವೆಂಕಟರೆಡ್ಡಿ ರವರ ತಂದೆ ಹೆಸರು ಪೆದ್ದಣ್ಣ . ವೆಂಕಟರೆಡ್ಡಿ ರವರು ತೀರಿಕೊಂಡು 15 ವರ್ಷಆಗಿದೆ ಎಂದರೆ 2007 ರಲ್ಲಿ ತೀರಿಕೊಂಡಿರುತ್ತಾರೆ. ನಿಪಿ- 4 ರಸೀದಿಯು ವೆಂಕಟರೆಡ್ಡಿ ಎನ್ನುವವರು ದಿಃ01-04-2021 ರಲ್ಲಿ ಕಟ್ಟಿರುವುದು ಎಂದರೆ ವೆಂಕಟರೆಡ್ಡಿ ಕಟ್ಟಿರುತ್ತಾರೆ ಮುಂದುವರಿದು ಅವರ ಹೆಸರಿನಲ್ಲಿ ಇದ್ದು ನಾವು ಕಟ್ಟಿರುತ್ತೇವೆ. ಪೆದ್ದಣ್ಣ ತಂದೆ ಹೆಸರು ಮರಿಯಪ್ಪ. ನಿಪಿ-5 ರಲ್ಲಿ ಮದ್ದಪ್ಪನ ಮಗ ಪೆದ್ದಣ್ಣನ ಹೆಸರಿಗೆ ಇರುವ ದಾಖಲೆ ಎಂದರೆ ಮರಿಯಪ್ಪ ಎಂಬುದನ್ನು ಮದ್ದಪ್ಪ ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ದಾಖಲೆಗಳಿಗೂ ಮತ್ತು ದಾವಾ ಆಸ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಅವರ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದು ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿಗಳಿಗೆ ಸೇರಿದ್ದು ನಿಮಗೆ ಸೇರಿರುವುದಿಲ್ಲ ಎಂದರೆ ಸಾಕ್ಷಿಯು ದಾರಿ ಇದೆ ಎಂದು ನುಡಿಯುತ್ತಾರೆ. 6 ಅಡಿ ಸಂದು ದಾರಿಗೆ

ಯಾವುದೇ ಬಾಗಿಲು ಇರುವುದಿಲ್ಲ. ಪ್ರತಿವಾದಿಗಳ ಮನೆಯ ಬಾಗಿಲಿನ ಎದಿರಿಗೆ 6 ಅಡಿ ಸಂದು ದಾರಿ ಇದೆ ಎಂದರೆ ಸರಿ. ಮೊದಲು ಪ್ರತಿವಾದಿಯರು ಅಜ್ಜನ ಕಾಲದಿಂದ ಅಲ್ಲಿ ಜೋಪಡಿಯನ್ನು ಹಾಕು ಹುಲ್ಲು ಹಾಕಿಕೊಂಡಿದ್ದರು ಎಂದರೆ ಅದು ಪಶ್ಚಿಮಕ್ಕೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಮಹಡಿ ಮೇಲೆ ಹೋಗಬೇಕಾದರೆ ಆ ಸ್ಟೇರ್ ಕೇಸ್ ಮೇಲೆ ಹೋಗಬೇಕು ಎಂದರೆ ಸರಿ. ನಿಮಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ಪ್ರತಿವಾದಿಯರ ಸ್ವಾಧೀನಕ್ಕೆ ದಕ್ಕೆ ಮಾಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)ಃ

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.